ಡನ್ನೋನ ಸಾಹಸ ಕಥೆಗಳು

ನಿಕೋಲಾಯ್ ನೋಸೋವ್

05





ಡ್ರಾಯವ್ಹರ ಡನ್ನೋ

RADUGA PUBLISHERS



ಡನ್ನೋನ ಸಾಹಸ ಕಥೆಗಳು

05

ನಿಕೊಲಾಯ್ ನೊಸೊವ್

ಡ್ರಾಯವ್ವರ ಡನ್ನೋ

ಚಿತ್ರಗಳುಃ ಬೋರಿಸ್ ಕಲಾಶಿನ್

ಕನ್ನಡಕ್ಕೆ ಪ್ರಭಾಕರ ನಾನಾವಟಿ








ಬೆಂಡಮ್ ಮತ್ತು ಅವನ ಸಹಾಯಕ ಟ್ವಿಸ್ಟಮ್ ತುಂಬಾ ಒಳ್ಳೆಯ ಮೆಕ್ಯಾನಿಕ್ ಆಗಿದ್ದರು. ಅವರು ನೋಡಲು ಒಂದೇ ರೀತಿಯಾಗಿ ಕಾಣುತ್ತಿದ್ದರೂ ಕೂಡ ಅವರಲ್ಲಿಯ ವ್ಯತ್ಯಾಸವೆಂದರೆ ಬೆಂಡಮ್ ಸ್ವಲ್ಪ ಎತ್ತರ, ಟ್ವಿಸ್ಟಮ್ ಸ್ವಲ್ಪ ಕುಳ್ಳ. ಅವರಿಬ್ಬರೂ ಚರ್ಮದ ಜಾಕೆಟ್‌ಗಳನ್ನು ಧರಿಸುತ್ತಿದ್ದರು. ತಮ್ಮ ಜೇಬುಗಳಲ್ಲಿ ಯಾವಾಗಲೂ ಸುತ್ತಿಗೆ, ಪ್ಲಾಯರ್ಸ್,ಫೈಲ್ಸ್, ರೆಂಚ್, ಸ್ಪ್ಯಾನರ್ಸ್, ಸ್ಕ್ರೂಡ್ರೈವರ್ ಹಾಗೂ ಇತರ ಉಪಕರಣಗಳನ್ನು ಇಟ್ಟುಕೊಂಡಿರುತ್ತಿದ್ದರು. ಆ ಜೇಬುಗಳು ಚರ್ಮದಿಂದ ಮಾಡಲ್ಪಟ್ಟಿರದಿದ್ದರೆ, ಬಹಳ ಹಿಂದೆಯೇ ಹರಿದು ಹೋಗುತ್ತಿದ್ದವು. ಅವರ ಟೊಪ್ಪಿಗೆಗಳೂ ಕೂಡ ಚರ್ಮದಿಂದಲೇ ಮಾಡಲ್ಪಟ್ಟಿದ್ದವು. ಆ ಟೊಪ್ಪಿಗೆಗಳ ಮೇಲೆ ಕಪ್ಪು ಗಾಗಲ್ ಇರುತ್ತಿತ್ತು. ಕೆಲಸ ಮಾಡುವಾಗ ಧೂಳು ಮತ್ತು ಕೊಳೆ ತಮ್ಮ ಕಣ್ಣುಗಳಿಗೆ ಬೀಳದಂತೆ ಬೆಂಡಮ್ ಮತ್ತು ಟ್ವಿಸ್ಟಮ್ ಗಾಗಲ್‌ಗಳನ್ನು ಕೆಳಕ್ಕೆ ಕಣ್ಣಿನ ಮೇಲೆ ಇಳಿಸಿಕೊಳ್ಳುತ್ತಿದ್ದರು.



ಇಡೀ ದಿನ ಬೆಂಡಮ್ ಮತ್ತು ಟ್ವಿಸ್ಟಮ್ ತಮ್ಮ ಅಂಗಡಿಯಲ್ಲಿ ಹಂಚು, ಸಾಸ್‌ಪ್ಯಾನ್, ಟೀ ಕೆಟಲ್, ಎಣ್ಣೆ ಸ್ಟೋವ್ ಮತ್ತು ಮಾಂಸ ಕತ್ತರಿಸುವ ಯಂತ್ರಗಳನ್ನು ದುರಸ್ತಿ ಮಾಡುತ್ತಾ ಕುಳಿತಿರುತ್ತಿದ್ದರು. ದುರಸ್ತಿ ಮಾಡಲು ಏನೂ ಇಲ್ಲದಾಗ, ಅವರು ಮೈಟ್ಸ್‌ಗಳಿಗಾಗಿ ಮೂರು ಮತ್ತು ಎರಡು ಗಾಲಿಯ ಸೈಕಲ್‌ಗಳನ್ನು ತಯಾರಿಸುತ್ತಿದ್ದರು.

ಒಂದು ದಿನ, ಯಾರೊಂದಿಗೂ ಒಂದು ಮಾತೂ ಆಡದೆ, ಬೆಂಡಮ್ ಮತ್ತು ಟ್ವಿಸ್ಟಮ್ ತಮ್ಮ ಅಂಗಡಿಯೊಳಗೆ ತಾವೇ ಬೀಗ ಹಾಕಿಕೊಂಡು ಏನೋ ಒಂದನ್ನು ತಯಾರಿಸಲು ಆರಂಭಿಸಿದರು. ಇಡೀ ಒಂದು ತಿಂಗಳು ಅವರು ಏನು ಮಾಡುತ್ತಿದ್ದಾರೆಂದು ಯಾರಿಗೂ ತೋರಿಸದೆ ಸುತ್ತಿಗೆಯಿಂದ ಬಡಿಯುತ್ತಾ, ಗರಗಸದಿಂದ ಕತ್ತರಿಸುತ್ತಾ, ಬೆಸುಗೆ ಹಾಕುತ್ತಾ ಕೆಲಸ ಮಾಡಿದರು. ತಿಂಗಳು ಮುಗಿದಾಗ, ಅವರು ಒಂದು ಮೋಟಾರು ಕಾರನ್ನು ತಯಾರಿಸಿರುವುದು ಗೊತ್ತಾಯಿತು.

ಆ ಮೋಟಾರು ಕಾರು ಸೋಡಾ ನೀರು ಮತ್ತು ಹಣ್ಣಿನ ರಸಗಳ ಮಿಶ್ರಣದಿಂದ ಓಡುತ್ತಿತ್ತು. ಕಾರಿನ ಮಧ್ಯದಲ್ಲಿ ಚಾಲಕನಿಗಾಗಿ ಒಂದು ಆಸನವಿತ್ತು. ಮತ್ತು ಆ ಆಸನದ ಮುಂದೆ ಸೋಡಾ ನೀರಿನ ಟ್ಯಾಂಕ್ ಇತ್ತು. ಆ ಟ್ಯಾಂಕ್‌ನಿಂದ ಸೋಡಾ ನೀರು ಒಂದು ಕೊಳವೆಯ ಮೂಲಕ ಅದರೊಳಗಿನ ಪಿಸ್ಟನ್ ಹೊಂದಿದ್ದ ಹಿತ್ತಾಳೆಯ ಸಿಲಿಂಡರ್‌ದಲ್ಲಿ ಸರಿದಾಡುತ್ತಿತ್ತು.





ಸೋಡಾದ ಒತ್ತಡದ ಪರಿಣಾಮ ಪಿಸ್ಟನ್ ಹಿಂದೆ ಮುಂದೆ ಚಲಿಸುತ್ತಿತ್ತು ಮತ್ತು ಗಾಲಿಗಳು ಸುತ್ತುವಂತೆ ಮಾಡುತ್ತಿತ್ತು. ಚಾಲಕನ ಆಸನದ ಮೇಲ್ಭಾಗದಲ್ಲಿ ಹಣ್ಣಿನ ರಸ ತುಂಬಿದ್ದ ಮತ್ತೊಂದು ಟ್ಯಾಂಕ್ ಇತ್ತು; ಅದರಿಂದ ರಸ ಒಂದು ಕೊಳವೆಯ ಮೂಲಕ ಕೆಳಗೆ ಹರಿದು ಎಂಜಿನ್ ಸರಿಯಾಗಿ ನಡೆಸುವ ಕೆಲಸ ಮಾಡುತ್ತಿತ್ತು. ಈ ರೀತಿಯ ಸೋಡಾ ನೀರಿನ ಕಾರು ಮೈಟ್ಸ್‌ಗಳ ನಡುವೆ ಬಹಳ ಜನಪ್ರಿಯವಾಯಿತು.
ಬೆಂಡಮ್ ಮತ್ತು ಟ್ವಿಸ್ಟಮ್ ತಯಾರಿಸಿದ ಕಾರಿನಲ್ಲಿ ಒಂದು ಅತ್ಯಂತ ಮುಖ್ಯವಾದ ಸುಧಾರಣೆ ಇತ್ತು: ಸೋಡಾ ನೀರಿನ ಟ್ಯಾಂಕ್‌ನಿಂದ ಒಂದು ಚಿಕ್ಕ ರಬ್ಬರ್ ಕೊಳವೆ ಹೊರಗೆ ನೇತಾಡುತ್ತಿತ್ತು. ಅದರ ಮೂಲಕ ಚಾಲಕನು ಕಾರನ್ನು ನಿಲ್ಲಿಸದೇ, ಬೇಕಾದಾಗಲೆಲ್ಲ ಒಂದು ಗುಟುಕು ಸೋಡಾ ಕುಡಿಯಬಹುದಾಗಿತ್ತು.
ಸ್ವಿಫ್ಟಿ ಆ ಕಾರನ್ನು ಓಡಿಸಲು ಕಲಿತನು. ಯಾರಾದರೂ ಅವನನ್ನು ಸವಾರಿ ಮಾಡಿಸು ಎಂದು ಕೇಳಿದರೆ, ಅವನು ಎಂದಿಗೂ ನಿರಾಕರಿಸುತ್ತಿರಲಿಲ್ಲ. ಟ್ರೀಕ್ಲಿ ಸ್ವೀಟರ್ ಎಲ್ಲರಿಗಿಂತ ಹೆಚ್ಚಾಗಿ ಸವಾರಿ ಕೇಳುತ್ತಿದ್ದನು. ಏಕೆಂದರೆ ಕಾರಿನಲ್ಲಿದ್ದಾಗ ಬೇಕಾದಷ್ಟು ಸೋಡಾ ಕುಡಿಯಬಹುದು ಎಂಬುದು ಅವನಿಗೆ ತಿಳಿದಿತ್ತು.



ಡನ್ನೋ ಕೂಡ ಸವಾರಿ ಮಾಡುವುದನ್ನು ಆನಂದಿಸುತ್ತಿದ್ದನು. ಆದರೆ ಡನ್ನೋಗೆ ತಾನೇ ಕಾರು ಓಡಿಸುವುದನ್ನು ಕಲಿಯಬೇಕು ಎಂಬ ಆಸೆ ಇತ್ತು. ಒಂದು ದಿನ ಅವನು ಸ್ವಿಫ್ಟಿಗೆ ಹೇಳಿದ:

“ನನಗೆ ಸ್ಟೀರಿಂಗ್ ಹಿಡಿಯಲು ಬಿಡು.”

“ನಿನಗೆ ಅದು ಬರುವುದಿಲ್ಲ," ಎಂದು ಸ್ವಿಫ್ಟಿ ಹೇಳಿದನು. “ಇದು ಮೋಟಾರ್ ಕಾರು. ಇದನ್ನು ಹೇಗೆ ಡ್ರೈವ್ ಮಾಡಬೇಕು ಎಂಬುದು ಗೊತ್ತಿರಬೇಕು.”

“ಅದರಲ್ಲಿ ಕಲಿಯುವಂತಹದೇನಿದೆ ಇದೆ?" ಎಂದು ಡನ್ನೋ ಕೇಳಿದನು.

“ನೀನು ಏನು ಮಾಡುತ್ತೀಯೋ ಅದನ್ನೆಲ್ಲ ನಾನು ನೋಡಿದ್ದೇನೆ— ಲಿವರ್‌ಗಳನ್ನು ಎಳೆಯುತ್ತೀ, ಸ್ಟೀಅರಿಂಗ ಗಾಲಿ ತಿರುಗಿಸುತ್ತೀ. ಇದೆಲ್ಲ ತುಂಬಾ ಸುಲಭ.”

“ನೋಡಲು ಸುಲಭವಾಗಿ ಕಾಣುತ್ತದೆ, ಆದರೆ ನಿಜವಾಗಿ ತುಂಬಾ ಕಷ್ಟ. ನೀನೂ ಸಾಯುವೆ, ಕಾರನ್ನೂ ಮುರಿದು ಪುಡಿಪುಡಿ ಮಾಡುವೆ.”

“ಸರಿ, ಸ್ವಿಫ್ಟಿ," ಎಂದು ಡನ್ನೋ ಬೇಜಾರಾಗಿ ಹೇಳಿದನು, "ಮುಂದಿನ ಸಲ ನೀನು ನನ್ನ ಬಳಿ ಏನಾದರೂ ಕೇಳಿದರೆ, ನಾನೂ ನಿನಗೆ ಕೊಡುವುದಿಲ್ಲ.”

ಒಂದು ದಿನ ಸ್ವಿಫ್ಟಿ ಹೊರಗೆ ಹೋಗಿದ್ದಾಗ, ಡನ್ನೋ ಅಂಗಳದಲ್ಲಿ ನಿಂತಿದ್ದ ಕಾರನ್ನು ನೋಡಿದನು. ಅವನು ಅದರ ಮೇಲೆ ಹತ್ತಿ, ಲಿವರ್‌ಗಳನ್ನು ಎಳೆಯಲು ಮತ್ತು ಪೆಡಲ್‌ಗಳನ್ನು ಒತ್ತಲು ಆರಂಭಿಸಿದನು.



ಮೊದ   ಮೊದಲಿಗೆ ಏನೂ ಆಗಲಿಲ್ಲ, ಆದರೆ ಇದ್ದಕ್ಕಿದ್ದಂತೆ ಕಾರು ಸಪ್ಪಳ ಮಾಡುತ್ತ ಚಲಿಸಲು ಆರಂಭಿಸಿತು. ಕಿಟಕಿಯಿಂದ ಹೊರಗೆ ನೋಡುತ್ತಿದ್ದ ಕೆಲವು ಮೈಟ್ಸ್ ಇದನ್ನು ನೋಡಿ ಮನೆಯ ಹೊರಗೆ ಓಡಿಬಂದರು.

“ಏನು ಮಾಡುತ್ತಿದ್ದೀ?" ಎಂದು ಅವರು ಕೂಗಿದರು. ”ನೀನು ಯಾವುದಾದರೂ ವಸ್ತುವಿಗೆ ಡಿಕ್ಕಿ ಹೊಡೆಯುತ್ತೀ!”

“ಇಲ್ಲ, ನಾನು ಡಿಕ್ಕಿ ಹೊಡೆಯುವುದಿಲ್ಲ," ಎಂದು ಡನ್ನೋ ಹೇಳಿದನು. ಆದರೆ ಅದೇ ಕ್ಷಣದಲ್ಲಿ ಅವನು ಡಾಟ್ ನಾಯಿ ಇರುವ ಮನೆಗೆ ಡಿಕ್ಕಿ ಹೊಡೆದು ಅದನ್ನು ಚೂರುಚೂರಾಗಿ ಒಡೆದನು. ಅದೃಷ್ಟವಶಾತ್, ಡಾಟ್ ಒಳಗಿರಲಿಲ್ಲ; ಇಲ್ಲದಿದ್ದರೆ ಅದು ಕೂಡ ಗಾಯಗೊಳ್ಳಬಹುದಿತ್ತು.

“ನೋಡು, ಏನು ಮಾಡಿದ್ದೀ! “ಎಂದು ಡೂನೋ ಕೂಗಿದನು. “ಈ ಕ್ಷಣವೇ ಕಾರನ್ನು ನಿಲ್ಲಿಸು!”

ಡನ್ನೋ ಹೆದರಿಹೋದನು. ಅವನಿಗೆ ಕಾರನ್ನು ನಿಲ್ಲಿಸಬೇಕಿತ್ತು. ಆದರೆ ಹೇಗೆ ನಿಲ್ಲಿಸಬೇಕೆಂಬುದು ಅವನಿಗೆ ತಿಳಿದಿರಲಿಲ್ಲ. ಅವನು ಈ ಲಿವರ್‌ನ್ನೂ ಆ ಲಿವರ್‌ನ್ನೂ ಎಳೆದನು, ಆದರೆ ಕಾರು ನಿಲ್ಲುವ ಬದಲು ಮೊದಲಿಗಿಂತಲೂ ಹೆಚ್ಚು ವೇಗವಾಗಿ ಓಡತೊಡಗಿತು.






ಅಂಗಳದಲ್ಲಿ ಮರದ ಹಲಗೆಗಳಿಂದ ಕಟ್ಟಿದ ಒಂದು ಮನೆ ಇತ್ತು.

ಧಡಾಮ್! ಭಡಾಕ್!

ಆ ಮನೆ ತುಂಡುತುಂಡಾಗಿ ಕುಸಿದು ಬಿತ್ತು. ಮರದ ಹಲಗೆಗಳು ಡನ್ನೋನ ಕಿವಿಗಳ ಸುತ್ತಮುತ್ತ ಬಿದ್ದವು. ಅವುಗಳಲ್ಲಿ ಒಂದು ಅವನ ಬೆನ್ನಿಗೆ ಬಡಿದರೆ, ಮತ್ತೊಂದು ಅವನ ತಲೆಗೆ ಬಡಿಯಿತು. ಅವನು ಸ್ಟೀರಿಂಗ್ ಗಾಲಿಯನ್ನು ಹಿಂದಕ್ಕೂ ಮುಂದಕ್ಕೂ ತಿರುಗಿಸುತ್ತಲೇ ಇದ್ದನು.

"ಗೇಟಗಳನ್ನು ತೆರೆಯಿರಿ, ಇಲ್ಲವಾದರೆ ಎಲ್ಲವನ್ನೂ ಪುಡಿಗೈದು ಬಿಡುತ್ತೇನೆ!" ಎಂದು ಕಾರು ಅಂಗಳದ ಸುತ್ತ ವೇಗವಾಗಿ ಓಡುತ್ತಿದ್ದಂತೆ ಅವನು ಕೂಗಿದನು.

ಮೈಟ್ಸ ಗಳು ಗೇಟಗಳನ್ನು ತೆರೆದರು. ಡನ್ನೋ ಕಾರನ್ನು ರಸ್ತೆಯೊಳಗೆ ಓಡಿಸಿಕೊಂಡು ಹೋದನು. ಅಷ್ಟೊಂದು ದೊಡ್ಡ ಸಪ್ಪಳ ಕೇಳಿ ಪಟ್ಟಣದ ಎಲ್ಲಾ ಜನರು ತಮ್ಮ ಮನೆಗಳಿಂದ ಹೊರಬಿದ್ದು ಓಡುತ್ತ ಬಂದರು.





“ದಾರಿ ಬಿಡಿ! “ಎಂದು ಕಾರು ವೇಗವಾಗಿ ಓಡಿಸುತ್ತಿದ್ದಾಗ ಡನ್ನೋ ಕೂಗಿದನು. ಡೂನೋ, ಬೆಂಡಮ್, ಪರಹ್ಯಾಪ್ಸ, ಡಾ. ಪಿಲ್‌ಮನ್ ಮತ್ತು ಇನ್ನೂ ಕೆಲವು ಮೈಟ್ಸ್ ಅದರ ಹಿಂದೆ ಓಡಿದರು, ಆದರೆ ಅವರಿಗೆ ಅದನ್ನು ನಿಲ್ಲಿಸಲು ಸಾಧ್ಯವಾಗಲಿಲ್ಲ. ಡನ್ನೋಗೆ ಕಾರನ್ನು ನಿಲ್ಲಿಸಲು ಆಗದೆ, ಅವನು ಊರಿನೆಲ್ಲೆಡೆ ಅಡ್ಡಾದಿಡ್ಡಿಯಾಗಿ ಚಲಾಯಿಸುತ್ತಿದ್ದನು. ಕೊನೆಗೆ ಕಾರು ನದಿಯ ಕಡೆಗೆ ಓಡಿಸಿ, ಎತ್ತರದ ದಡದಿಂದ ನೇರವಾಗಿ ಕೆಳಗೆ ಉರುಳಿಸಿದನು. ಡನ್ನೋ ಕಾರಿನಿಂದ ಹೊರಗೆ ಬಿದ್ದು, ನದಿಯ ದಡದಲ್ಲಿ ಪ್ರಜ್ಞಾಹೀನನಾಗಿ ಮಲಗಿದನು. ಕಾರು ನದಿಯ ತಳಕ್ಕೆ ಮುಳುಗಿ ಹೋಯಿತು.

ಡೂನೋ, ಬೆಂಡಮ್, ಪರಹ್ಯಾಪ್ಸ ಮತ್ತು ಡಾ. ಪಿಲ್‌ಮನ್ ಡನ್ನೋನನ್ನು ಮನೆಗೆ ಹೊತ್ತುಕೊಂಡು ಹೋದರು. ಅವನು ಬದುಕುವುದಿಲ್ಲ ಎಂದು ಅವರು ಭಾವಿಸಿದರು. ಆದರೆ ಅವನನ್ನು ಹಾಸಿಗೆಯ ಮೇಲೆ ಮಲಗಿಸಿದ ಕೂಡಲೇ ಅವನು ಕಣ್ಣು ತೆರೆದನು.

“ನಾನು ಇನ್ನೂ ಬದುಕಿದ್ದೇನೇ?" ಎಂದು ಸುತ್ತಲೂ ನೋಡುತ್ತಾ ಅವನು ನರಳಿದನು.

“ಹೌದು, ಬದುಕಿದ್ದೀ," ಎಂದು ಡಾ. ಪಿಲ್‌ಮನ್ ಹೇಳಿದನು. “ಆದರೆ ದಯವಿಟ್ಟು ಅಲುಗಾಡಬೇಡ. ನಾನು ನಿನ್ನನ್ನು ಪರೀಕ್ಷಿಸಬೇಕು.”

ಅವನು ಡನ್ನೋನ ಬಟ್ಟೆಗಳನ್ನು ತೆಗೆಸಿ ಡನ್ನೋನನ್ನು ಪರೀಕ್ಷಿಸಿದನು.



"ಎಷ್ಟೇ ವಿಚಿತ್ರವಾಗಿ ತೋರಿದರೂ, ಒಂದೇ ಒಂದು ಎಲುಬೂ ಮುರಿದಿಲ್ಲ," ಎಂದು ಅವನು ಪರೀಕ್ಷೆ ಮುಗಿಸಿದ ನಂತರ ಹೇಳಿದನು.
"ಆದರೆ ನಿನ್ನ ದೇಹದಲ್ಲಿ ಕೆಲವು ಮರದ ಚೂರುಗಳು ಸಿಕ್ಕಿಕೊಂಡಿವೆ."
"ಒಂದು ಹಲಗೆ ನನ್ನ ಬೆನ್ನಿಗೆ ಬಡಿದಿತ್ತು," ಎಂದು ಡನ್ನೋ ವಿವರಿಸಿದ.
"ಆ ಚೂರುಗಳನ್ನು ತೆಗೆದುಹಾಕಬೇಕಾಗುತ್ತದೆ," ಎಂದು ಡಾ. ಪಿಲ್‌ಮನ್ ತಲೆ ಆಡಿಸುತ್ತಾ ಹೇಳಿದನು.
"ನೋವಾಗುತ್ತದೆಯೇ?" ಎಂದು ಹೆದರಿದ ಡನ್ನೋ ಕೇಳಿದನು.
"ಸ್ವಲ್ಪವೂ ಇಲ್ಲ. ಬಾ, ಮೊದಲು ದೊಡ್ಡ ಚೂರನ್ನೇ ತೆಗೆದುಹಾಕುತ್ತೇನೆ."
"ಅಯ್ಯೋ! "ಎಂದು ಡನ್ನೋ ಕಿರುಚಿದನು.
"ಏನು, ನೋವಾಯಿತೇ?" ಡಾ. ಪಿಲ್‌ಮನ್ ಆಶ್ಚರ್ಯದಿಂದ ಕೇಳಿದನು.
"ಖಂಡಿತವಾಗಿಯೂ ನೋವಾಯಿತು!"
"ಸರಿ, ಸ್ವಲ್ಪ ಸಹಿಸಿಕೊಳ್ಳಬೇಕು. ನಿಜವಾಗಿ ಅಷ್ಟೇನೂ ನೋವಾಗುವುದಿಲ್ಲ."
"ನೋವಾಗುತ್ತದೆ! ಅಯ್ಯೋ! ಅಯ್ಯೋ! ಅಯ್ಯೋ!"
"ನೀನು ಕಿರುಚುವುದನ್ನು ನೋಡಿದರೆ ನಾನು ನಿನ್ನ ಕತ್ತು ಹಿಚುಕುತ್ತಿದ್ದೇನೆ ಎಂದು ಯಾರಾದರೂ ಭಾವಿಸಬಹುದು! ಏಕೆ ಇಷ್ಟು ಕಿರುಚುತ್ತಿದ್ದೀ?"
"ನೋವಾಗುತ್ತಿದೆ! ನೀನು ನೋವಾಗುವುದಿಲ್ಲ ಎಂದಿದ್ದೀ, ಆದರೆ ನೋವಾಗುತ್ತಿದೆ!"
"ಇಷ್ಟುಚೀರಾಡ ಬೇಡ. ಈಗ ಒಂದೇ ಒಂದು ಚೂರು ಮಾತ್ರ ಉಳಿದಿದೆ!"

“ಅದನ್ನಲ್ಲಿಯೇ ಇರಲಿ ಬಿಡು. ನನ್ನೊಳಗೆ ಒಂದು ಮುಳ್ಳಿನ ಚೂರು ಇದ್ದರೂ ನನಗೆ ತೊಂದರೆಯಿಲ್ಲ. ಅಯ್ಯೋ! ಓಓಓ!”

“ಅಷ್ಟೇ. ನಾನು ಅದಕ್ಕೆ ಅಯೋಡಿನ್ ಹಚ್ಚುತ್ತೇನೆ, ಆಗ ಎಲ್ಲವೂ ಸರಿಯಾಗುತ್ತದೆ.”

“ಅಯೋಡಿನ್ ಹಚ್ಚಿದರೆ ನೋವಾಗುತ್ತದೆಯೇ?"

“ಅಯ್ಯೋ, ಇಲ್ಲ. ಅಯೋಡಿನ್ ಹಚ್ಚಿದರೆ ನೋವಾಗುವುದಿಲ್ಲ. ಸುಮ್ಮನೆ ಮಲಗಿರು.”

“ಅಯ್ಯೋ   ಓ   ಓ!”

“ನಿನಗೆ ಕಾರಿನಲ್ಲಿ ಸವಾರಿ ಮಾಡುವುದೇ ತುಂಬಾ ಇಷ್ಟವಾದರೆ, ಅದರ ಪರಿಣಾಮಗಳನ್ನೂ ಅನುಭವಿಸಲೇಬೇಕು.”

“ಅಯ್ಯೋ, ಅಯ್ಯೋ! ಉರಿಯುತ್ತಿದೆ!“

“ಅದು ಹೆಚ್ಚು ಹೊತ್ತು ಇರುವುದಿಲ್ಲ. ಈಗ ನಾನು ನಿನ್ನ ದೇಹದ ತಾಪಮಾನ ಅಳೆಯಬೇಕು.”

“ಅಯ್ಯೋ, ಬೇಡ! ದಯವಿಟ್ಟು ಬೇಡ!”

“ಏಕೆ ಬೇಡ?"

“ನೋವಾಗುತ್ತದೆ.”

“ದೇಹದ ತಾಪಮಾನ ಅಳೆಯುವುದರಿಂದ ನೋವಾಗುವುದಿಲ್ಲ.”

“ನೀನು ಯಾವಾಗಲೂ ನೋವಾಗುವುದಿಲ್ಲ ಎನ್ನುತ್ತೀ, ಆದರೆ ಯಾವಾಗಲೂ ನೋವಾಗುತ್ತದೆ.”

“ಎಂಥಾ ಮಗು! ನಾನು ಇದಕ್ಕೂ ಮೊದಲು ಎಂದಾದರೂ ನಿನ್ನ ದೇಹದ ತಾಪಮಾನ ಅಳೆದಿಲ್ಲವೇ?"

“ಇಲ್ಲ, ಅಳೆಯಲೇ ಇಲ್ಲ.”



“ಸರಿ, ಈಗ ನಿನಗೆ ಇದು ನಿಜವಾಗಿಯೂ ನೋವಾಗುವುದಿಲ್ಲ ಎಂಬುದು ಗೊತ್ತಾಗುತ್ತದೆ," ಎಂದು ಪಿಲ್ ಮನ್ ಹೇಳಿದನು. ಅವನು ತಾಪಮಾನಮಾಪಕವನ್ನು ತರಲು ಹೋದನು.

ಅವನು ಹೋದ ತಕ್ಷಣವೇ ಡನ್ನೋ ಹಾಸಿಗೆಯಿಂದ ಜಿಗಿದು ಎದ್ದನು. ಕಿಟಕಿಯ ಮೂಲಕ ಹೊರಗೆ ಹಾರಿ, ಗಂಕಿಯ ಮನೆಗೆ ಓಡಿಹೋದನು.

ಡಾ. ಪಿಲ್‌ಮನ್ ಥರ್ಮಾಮೀಟರದೊಂದಿಗೆ ಹಿಂದಿರುಗಿ ಬಂದಾಗ, ಡನ್ನೋ ಅಲ್ಲಿರಲಿಲ್ಲ.

“ಎನಪ್ಪ, ಎಂತಹ ರೋಗಿ!” ಎಂದು ಪಿಲ್ ಮನ್ ಗೊಣಗಿದನು.

“ಇವನನ್ನು ಗುಣಪಡಿಸಲು ನಾನು ನನ್ನಿಂದಾದಷ್ಟು ಪ್ರಯತ್ನ ಮಾಡುತ್ತಿದ್ದೇನೆ. ಆದರೆ ನನಗೆ ಧನ್ಯವಾದ ಹೇಳುವುದರ ಬದಲು, ಇವನು ಕಿಟಕಿಯಿಂದ ಹಾರಿ ಓಡಿಹೋಗಿದ್ದಾನೆ! ಅವನಿಗೆ ತನ್ನ ಈ ವರ್ತನೆಯ ಬಗ್ಗೆ ನಾಚಿಕೆ ಬರಬೇಕು!”

ಎಂದು ತೆಗಳುತ್ತ ಪಿಲ್ ಮನ್ ನಿಂತು ಬಿಟ್ಟನು.

